ಊ) ಸೈಕಲ್ ಸಿಗಲಿಲ್ಲವೆಂದು ಅನೇಕ ಮಕ್ಕಳು ಮಾನಸಿಕವಾಗಿ ನೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) 2006–07ನೇ ಸಾಲಿನಲ್ಲಿ ಒಟ್ಟು 4,07,160 ಹೆಣ್ಣು ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ ಅವರಲ್ಲಿ 1,75,023 ವಿದ್ಯಾರ್ಥಿನಿಯರು ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸೇರಿರುತ್ತಾರೆ

ಆ) ಒಟ್ಟು 1,75,023 ಬಾಲಕಿಯರಿಗೆ ಉಚಿತ ಬೈಸಿಕಲ್‌ಗಳನ್ನು ವಿತರಿಸಲಾಗಿದೆ ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬಗಳಿಗೆ (ಬಿ ಪಿ ಎಲ್) ಸೇರಿದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಹೆಣ್ಣು ಮಕ್ಕಳಿಗೆ ಮಾತ್ರ ಬೈಸಿಕಲ್ ವಿತರಿಸಲಾಗಿದೆ

ಇ) ಒಂದೂ ಬೈಸಿಕಲ್ ವಿತರಿಸದಿರುವ ಸರ್ಕಾರಿ ಮತ್ತು ಅನುದಾನಿತ ಶಾಲೆ ಯಾವುದೂ ಇರುವುದಿಲ್ಲ, ಮುಂದಿನ ಪ್ರಶ್ನೆ ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

1041 (1224) ಶ್ರೀ ಸಿದ್ದುಸಾವದಿ (ಜಮಖಂಡಿ). ಮಾನ್ಯ ಜಲಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಕೃಷ್ಣಾ ನದಿಯ ಆಲಮಟ್ಟಿ ಮತ್ತು ಹಿಪ್ಪರಗಿ ಯೋಜನೆಯಡಿ ಮುಳುಗಡೆ ಆದ ಮತ್ತು ಇನ್ನೂ ಮುಳುಗಡೆಯಾಗುವ (519 60 ರಲ್ಲಿ ಮತ್ತು 524 ರಲ್ಲಿ) ಹಳ್ಳಿಗಳೆಷ್ಟು, ಎಷ್ಟು ಹಳ್ಳಿಗಳಿಗೆ ಈಗಾಗಲೇ ಪುನರ್ವಸತಿ ಕಲ್ಪಿಸಲಾಗಿದೆ, ಉಳಿದವುಗಳಿಗೆ ಯಾವಾಗ ಕಲ್ಪಿಸಲಾಗುವುವು, (ಪ್ರತ್ಯೇಕ ವಿವರ ಒದಗಿಸುವುದು),

ಆ) ಈ ಎರಡೂ ಯೋಜನೆಗಳಲ್ಲಿನ ಸಂತ್ರಸ್ಥರ ಕುಟುಂಬಗಳ ಸಂಖ್ಯೆ ಎಷ್ಟು, ಮುಳುಗಡೆಯಾದ ಮತ್ತು 524ಕ್ಕೆ ಮುಳುಗಡೆಯಾಗುವ ಜಮೀನುಗಳು ಎಷ್ಟು, (ಪ್ರತ್ಯೇಕ ವರದಿ ನೀಡುವುದು),

ಇ) ಎರಡೂ ಯೋಜನೆಯ ಸಂತ್ರಸ್ಥರಿಗೆ ಕೊಟ್ಟ ಸೌಲಭ್ಯಗಳೇನು, (ಪ್ರತ್ಯೇಕ ವಿವರ ನೀಡುವುದು)

ಈ) ಎರಡೂ ಯೋಜನೆಗಳಿಗೆ ವೆಚ್ಚ ಮಾಡಿದ ಖರ್ಚು ಎಷ್ಟು, 524ಕ್ಕೆ ನೀರು ನಿಲ್ಲಿಸಿದಾಗ ಬೇಕಾದ ಅನುದಾನವೆಷ್ಟು ಅದನ್ನು ಯಾವ ರೀತಿ ಹೊಂದಿಸಲಾಗುವುದು,

ಉ) ಎಷ್ಟು ಗ್ರಾಮಗಳು ಮತ್ತು ಎಷ್ಟು ಕುಟುಂಬಗಳು ಪರಿಹಾರ ಸಿಗದೆ ಉಳಿದಿವೆ, ಎಲ್ಲವನ್ನು ಯಾವಾಗ ಕೊಡಲಾಗುವುದು?

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ಅಣೆಕಟ್ಟಿನ ಪೂರ್ಣ ಜಲಾಶಯ ಮಟ್ಟ 519 60 ಮೀ ಇದ್ದಾಗ ಜಲಾಶಯದ ಹಿನ್ನೀರಿನಿಂದ 136 ಗ್ರಾಮಗಳು ಬಾಧಿತವಾಗಿರುವ ಪ್ರಯುಕ್ತ ಸದರಿ ಗ್ರಾಮಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಮುಳುಗಡೆಯಾದ ಗ್ರಾಮಗಳ ಸಂತ್ರಸ್ಥರಿಗೆ 104 ಕೇಂದ್ರಗಳಲ್ಲಿ ಪುನರ್ವಸತಿ ಕಲ್ಪಿಸಲಾಗಿದೆ

ಮುಂದೆ ಕೃಷ್ಣಾ ಕಣಿವೆಯಲ್ಲಿ ಹೆಚ್ಚುವರಿ ನೀರು ಲಭ್ಯವಾಗಿ ಅದರಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಹಂಚಿಕೆಯಾದಾಗ ಆಲಮಟ್ಟಿ ಆಣೆಕಟ್ಟಿನ ಪೂರ್ಣ ಜಲಾಶಯ ಮಟ್ಟ 524 256 ಮೀ ಆದಲ್ಲಿ ಇನ್ನೂ 20 ಗ್ರಾಮಗಳು ಸ್ವಾಧೀನಪಡಿಸಿಕೊಳ್ಳಬೇಕಾಗುವುದು ಕೃಷ್ಣಾ ಕಣಿವೆಯಲ್ಲಿ ಹೆಚ್ಚುವರಿ ನೀರಿನ ಹಂಚಿಕೆ ಕೃಷ್ಣಾ ನ್ಯಾಯಾಧಿಕರಣದ ಮುಂದೆ ಇರುವುದರಿಂದ ನ್ಯಾಯಾಧೀಕರಣದಿಂದ ಸ್ಪಷ್ಟ ಆದೇಶ ಬಂದಲ್ಲಿ ಸ್ವಾಧೀನಕ್ಕೆ ಸಂಬಂಧಿಸಿದಂತೆ ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುವುದು

ಹಿಪ್ಪರಗಿ ಅಣೆಕಟ್ಟು ಯೋಜನೆಯಡಿಯಲ್ಲಿ 21 ಗ್ರಾಮಗಳು ಪೂರ್ತಿಯಾಗಿ ಮತ್ತು 5 ಗ್ರಾಮಗಳು ಭಾಗಶಃ ಸ್ಥಳಾಂತರಗೊಳ್ಳಲಿದ್ದು, ಈ ಕುರಿತು ಸರ್ಕಾರದ ಅನುಮೋದನೆಯನ್ನು ದಿನಾಂಕ 26 12 2006 ರಂದು ನೀಡಲಾಗಿದ್ದು, ಪುನರ್ವಸತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ವಿವಿಧ ಕಾಮಗಾರಿಗಳು ಚಾಲ್ತಿಯಲ್ಲಿವೆ

ಆ) ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಬಾಧಿತ ಕುಟುಂಬಗಳು 81,942 ಆಗಿದ್ದು, ಎಫ್ ಆರ್ ಎಲ್ 519 60 ಮೀ ರ ವರೆಗೆ 1,37,835 ಎಕರೆ ಜಮೀನುಗಳನ್ನು

ಸ್ವಾಧೀನಪಡಿಸಿಕೊಳ್ಳಲಾಗಿದೆ ಎಫ್ ಆರ್ ಎಲ್ ಮಟ್ಟ 524 256 ಮೀ ರವರೆಗೆ ಅಂದಾಜು 71,000 ಎಕರೆ ಹೆಚ್ಚುವರಿ ಜಮೀನು ಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ ಹಿಪ್ಪರಗಿ ಆಣೆಕಟ್ಟು ಯೋಜನೆಯಡಿಯಲ್ಲಿ ಒಟ್ಟು 26 ಬಾಧಿತ ಗ್ರಾಮಗಳು 15,291 ಕುಟುಂಬಗಳು ಬಾಧಿತೆಗೆ ಒಳಪಟ್ಟಿರುತ್ತವೆ ಈ ಯೋಜನೆಯ ಹಿನ್ನೀರಿನಲ್ಲಿ 524 87 ಮೀ ರೊಳಗೆ 5,165 ಎಕರೆಗಳ ಜಮೀನು ಮುಳುಗಡೆಗೆ ಒಳಪಡುತ್ತದೆ

ಇ) ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ಜಲಾಶಯದಲ್ಲಿ ಬಾಧಿತ ಗ್ರಾಮಗಳಿಗೆ ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಲಾಗಿದೆ ಈ ಎಲ್ಲಾ ಪುನರ್ವಸತಿ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ಕುಡಿಯುವ ನೀರಿನ ವ್ಯವಸ್ಥೆ, ಬೀದಿ ದೀಪ, ಗಚರಂಡಿ, ಶಾಲಾ ಕಟ್ಟಡ, ರುದ್ರಭೂಮಿ, ಶೌಚಾಲಯ, ಅಂಗನವಾಡಿ, ಪಂಚಾಯಿತಿ, ಎ ಎನ್ ಎಮ್ (Auxiliary Nursing Medical Center) ಕಟ್ಟಡ, ಶಿಕ್ಷಕರ ವಸತಿ ಗೃಹ ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸಲಾಗಿದೆ

ಹಿಪ್ಪರಗಿ ಯೋಜನೆಗೆ ಸಂಬಂಧಿಸಿದಂತೆ ಪುನರ್ವಸತಿ ಒದಗಿಸುವ ಕುರಿತು ಸರ್ಕಾರದಿಂದ ದಿನಾಂಕ 26 12 2006 ರಂದು ಅನುಮೋದನೆ ನೀಡಲಾಗಿದ್ದು, ಪ್ರಕ್ರಿಯೆ ವಿವಿಧ ಹಂತದಲ್ಲಿದೆ

ಈ) ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಎಫ್ ಆರ್ ಎಲ್ 519 60 ಮೀ ವರೆಗೆ ಭೂಸ್ವಾಧೀನಪಡಿಸಿಕೊಂಡ ಕ್ಷೇತ್ರಕ್ಕೆ ರೂ 1568 00 ಕೋಟಿ ಖರ್ಚು ಮಾಡಲಾಗಿದೆ ಎಫ್ ಆರ್ ಎಲ್ 524 256 ಮೀ ವರೆಗೆ ನೀರು ನಿಲ್ಲಿಸಿದಲ್ಲಿ ಭೂಸ್ವಾಧೀನಕ್ಕಾಗಿ ಸುಮಾರು ರೂ 2500 00 ಕೋಟಿ ಅನುದಾನ ಬೇಕಾಗಬಹುದು ಸದರಿ ಅನುದಾನ ಒದಗಿಸುವ ಕುರಿತು ಮುಂದಿನ ಅಗತ್ಯ ನಿರ್ಧಾರ ಸೂಕ್ತ ಸಮಯದಲ್ಲಿ ಕೈಗೊಳ್ಳಬೇಕಾಗುತ್ತದೆ

ಹಿಪ್ಪರಗಿ ಪುನರ್ವಸತಿ ಅಡಿಯಲ್ಲಿ ಮುಳುಗಡೆಯಾದ ಜಮೀನುಗಳ ಪರಿಹಾರಕ್ಕಾಗಿ ಈವರೆಗೆ ರೂ 4,538 27 ಲಕ್ಷ ವೆಚ್ಚ ಮಾಡಲಾಗಿದೆ

ಉ) ಆಲಮಟ್ಟಿ ಜಲಾಶಯದ ಎಫ್ ಆರ್ ಎಲ್ 519 60 ಮೀ ವರೆಗೆ ಸ್ವಾಧೀನಪಡಿಸಿಕೊಂಡ ಎಲ್ಲಾ ಸಂತ್ರಸ್ಥರಿಗೆ ಪರಿಹಾರ ವಿತರಿಸಲಾಗಿದೆ

ಹಿಪ್ಪರಗಿ ಅಣೆಕಟ್ಟಿಗೆ ಸಂಬಂಧಿಸಿದಂತೆ ಪುನರ್ವಸತಿ ಕಾರ್ಯವು ಈವರೆಗೆ ಆರಂಭವಾಗಿಲ್ಲ ಅದನ್ನು ಸಧ್ಯದಲ್ಲೆ ಪ್ರಾರಂಭಿಸಲಾಗುವುದು ಹಾಗೂ ಕುಟುಂಬಗಳಿಗೆ ಪರಿಹಾರ ನೀಡಲಾಗುವುದು

1042 (1225) ಶ್ರೀ ಸಿದ್ದುಸಾವದಿ (ಜಮಖಂಡಿ) ಮಾನ್ಯ ಜಲಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಜಮಖಂಡಿ ತಾಲ್ಲೂಕಿನಲ್ಲಿ ಸಾವಿರಾರು ಹೆಕ್ಟೇರು ಜಮೀನು ಸವಳು ಬಿದ್ದಿದ್ದು ಬಂಜರು ಭೂಮಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಅದನ್ನು ತಡೆಯಲು ಕೈಗೊಂಡ ಕ್ರಮಗಳೇನು,

ಆ) 01 04 2004 ರಿಂದ ಇಲ್ಲಿಯವರೆಗೆ ಕಾಡಾದಿಂದ ಜಮಖಂಡಿ ತಾಲ್ಲೂಕಿನಲ್ಲಿ ಕೈಗೊಂಡ ಕೆಲಸಗಳ ಸಂಖ್ಯೆ ಎಷ್ಟು, ಅವುಗಳಿಗೆ ಖರ್ಚಾದ ಹಣವೆಷ್ಟು, ಈ ಎಲ್ಲಾ ಕೆಲಸಗಳು ಯಾವ ಹಂತದಲ್ಲಿ ಇವೆ,

ಇ) 2006–07 ರಲ್ಲಿ ಮಂಜೂರಾದ ಆಲಬಾಳ–ಮುತ್ತೂರ ಮಧ್ಯದಲ್ಲಿರುವ ಕೆಲಸಗಳು ಯಾವ ಹಂತದಲ್ಲಿದೆ, ಈಗಾಗಲೇ ಎಷ್ಟು ಬಿಲ್ಲನ್ನು ಗುತ್ತಿಗೆದಾರನಿಗೆ ಪಾವತಿಸಲಾಗಿದೆ,

ಈ) ಕೆಲಸ ಮುಕ್ತಾಯವಾಗದೇ ಪೂರ್ತಿ ಬಿಲ್ ಕೊಡಲು ಕಾರಣವೇನು,

ಉ) ಪ್ರಸಕ್ತ ಸಾಲಿಗೆ ಜಮಖಂಡಿ ತಾಲ್ಲೂಕಿನ ಕಾಡಾದಲ್ಲಿ ಮಂಜೂರಾದ ಕೆಲಸಗಳಾವುವು, ಅವುಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)

ಅ) ಜಮಖಂಡಿ ತಾಲ್ಲೂಕಿನಲ್ಲಿ ಹಲವು ನೀರಾವರಿ ಪ್ರದೇಶವು ಸವಳು ಜವಳಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ ಅದನ್ನು ತಡೆಯಲು ಅಂತರ ಬಸಿಗಾಲುವೆ ಮತ್ತು ಹೊಲಬಸಿಗಾಲುವೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯಗತಗೊಳಿಸಲಾಗುತ್ತಿದೆ

ಆ) ಹೊಲ ಬಸಿಗಾಲುವೆಗೆ ಸಂಬಂಧಿಸಿದಂತೆ 2004–05 ರಿಂದ 2005–06ರ ವರೆಗೆ 9 ಕಾಮಗಾರಿಗಳನ್ನು (710 36 ಹೆ) ತೆಗೆದುಕೊಂಡಿದ್ದು, ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಹಾಗೂ ರೂ 7 83 ಲಕ್ಷಗಳು ಖರ್ಚಾಗಿರುತ್ತದೆ 2006–07ನೇ ಸಾಲಿಗೆ 11 ಕಾಮಗಾರಿಗಳನ್ನು (777 48 ಹೆ)